ಸ್ಥಿತಿಯಾಗಿದೆ. ಮಲೆನಾಡಿನಲ್ಲೇ ಈ ವರ್ಷ ಬರಗಾಲ ಬಂದಿರುವ ಕಾರಣ ಮಲೆನಾಡು ಭಾಗಕ್ಕೆ ಹೆಚ್ಚು ತೆರೆದ ಬಾವಿಗಳನ್ನು ತೋಡಿಸಲು ಸರ್ಕಾರದ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತೀರಿ ಹೇಳಿ ?

ಶ್ರೀ ಪಟಮಕ್ಕಿ ರತ್ನಾಕರ್.—ಸದಸ್ಯರುಗಳು ಕೇಳುವ ಪ್ರಶ್ನೆಗಳಿಗೆ ಜವಾಬ್ದಾರಿ ಬೇಡವೆ ? ಮಾನ್ಯ ಮಂತ್ರಿಗಳು ಇಲ್ಲಿದ್ದು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು.— ಇಲ್ಲ, ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೂ ಬೇರೆಯವರು ಉತ್ತರ ಕೊಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳಂತ್ತೇನೆ.

೫. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಾಯ ಧನ ಪಡೆಯುತ್ತಿರುವ ೧೫೦ ಪ್ರೌಢಶಾಲೆಗಳಿಗೆ ಶಿಕ್ಷಕರಿಗೆ ವೇತನ ದೊರಕದಿರುವುದು

† ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು) —ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಾಯ ಧನ ಪಡೆಯುತ್ತಿರುವ ಸುಮಾರು ೧೫೦ ಪ್ರೌಢ ಶಾಲೆಗಳ ಪೈಕಿ ೭೦ ಶಾಲೆಗಳ ಶಿಕ್ಷಕರುಗಳಿಗೆ ಮಾತ್ರ ಜನವರಿ ತಿಂಗಳವೇತನ ದೊರೆತಿದ್ದು ಫೆಬ್ರುವರಿ ತಿಂಗಳ ವೇತನ ಇಡೀ ೧೫೦ ಶಾಲೆಗಳ ಶಿಕ್ಷಕರುಗಳಿಗೂ ದೊರಕದಿರುವುದರ ಜೊತೆಗೆ ಸಹಾಯ ಧನ ಪಡೆಯುತ್ತಿರುವ ಕಿರಿಯ ಕಾಲೇಜುಗಳಲ್ಲಿನ ಶಿಕ್ಷಕರುಗಳಿಗೂ ಜನವರಿ ಮತ್ತು ಫೆಬ್ರುವರಿ ತಿಂಗಳ ವೇತನ ದೊರಕದಿರುವುದರಿಂದಾಗಿ ಇಡೀ ಶಿಕ್ಷಕವೃಂದ ತೊಂದರೆಗೊಳಗಾಗಿದ್ದು ಜೂನಿಯರ್ ಕಾಲೇಜಿನ ಶಿಕ್ಷಕರುಗಳು ಸತ್ಯಾಗ್ರಹ ಹೂಡುವುದಾಗಿ ನಿರ್ಧರಿಸಿರುವುದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಸರಕಾರದವರು ಸದರಿ ಶಿಕ್ಷಕರ ವೇತನವನ್ನು ನೀಡಲು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವಿದ್ಯಾ ಸಚಿವರು ಪರಿಷತ್‌ನಲ್ಲಿದ್ದಾರೆ ಅವರಿಂದ ಉತ್ತರ ತರಿಸಿಕೊಡುತ್ತೇನೆ.

೧೨-೩೦ ಪಿ.ಎಂ.

೬. ಕಂಕನಾಡಿಯಿಂದ ಕೇರಳದ ಗಡಿಯವರೆಗಿನ ರಸ್ತೆಯಲ್ಲಿ ವಾಹನಗಳ ವೇಗಕ್ಕೆ ತಡೆ ಹಾಕಿಸುವುದು

†ಶ್ರೀ ಬಿ. ಎಂ. ಇದಿನಬ್ಬ.–ಮಂಗಳೂರು ಕಂಕನಾಡಿಯಿಂದ ತಲಪಾಡಿ ಕೇರಳದ ಗಡಿವರೆಗಿನ ೧೬ ಕಿಲೋಮೀಟರ್ ಪ್ರದೇಶದಲ್ಲಿ, ಮಂಗಳಗಂಗೋತ್ರಿ ಉಳ್ಳಾಲ ಕಡೆಗಳಿಗೆ ಸುಮಾರು ೫೦ಕ್ಕೂ ಮಿಕ್ಕಿ ಸಿಟಿ ಬಸ್ಸುಗಳು, ಪ್ರಯಾಣಿಕರ ಸೀದಾ ಬಸ್ಸುಗಳು ಓಡಾಡುತ್ತಿವೆ. ಈ ೧೬ ಕಿಲೋ ಮೀಟರ್ ಪ್ರದೇಶದಲ್ಲಿ ವರ್ಷಂ ಪ್ರತಿ ಹತ್ತಿಪ್ಪತ್ತು ಅಪಘಾತಗಳು ಆಗುತ್ತಿವೆ. ೧೦ಕ್ಕೂ ಮಿಕ್ಕಿ ಜೀವಹಾನಿ ಕಳೆದ ಮೂರು ವರ್ಷಗಳಲ್ಲಿ ಆಗಿದೆ. ಜಖಂ, ವಾಹನ ನಾಶವೂ ಆಗಿದೆ ಈ ಬಸ್ಸುಗಳು ಮಿತಿಮೀರಿದ ವೇಗ, ಓವರ್‌ಟೇಕ್, ಓವರ್ ಲೋಡ್‌ನಿಂದ ಹೀಗಾಗುತ್ತಿದೆ. ಕಳೆದ ವರ್ಷ ಸಂಬಂಧಿಸಿದ ಸಚಿವರು ಈ ಪ್ರಸ್ತಾಪ ಬಂದಾಗ ವೇಗವನ್ನು ಕಡಿಮೆ ಮಾಡಲು ಗವರ್ನರ್ ಹಾಕಿಸುವುದಾಗಿಯೂ, ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿಯೂ ತಿಳಿಸಿದ್ದರು. ಆದರೆ ಈವರೆಗೂ ಏನೂ ಮಾಡಿರುವುದಿಲ್ಲ. ಆದ ಕಾರಣ ಈ ಬಸ್ಸುಗಳ ವೇಗ, ಇನ್ನಿತರ ವಿಚಾರಗಳ ಬಗ್ಗೆ ತಕ್ಕ ಕ್ರಮ ಅಗತ್ಯವಾಗಿರುತ್ತದೆ. ಈ ಕುರಿತು ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಾರಿಗೆ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.